ಲಲನಾಮಣಿಯರನ್ನು ಹೆತ್ತ ಇತಿಹಾಸ ಹೊತ್ತ ಸ್ವದೇಶದಲ್ಲಿ ಬೇರೆ ದೇಶದ ಹೆಣ್ಣಿನ ಹಿಂದೆ ಅಲೆಯುತ್ತಿರುವ ಮಗನಿಗೆ ಈ ಮಣ್ಣಿನ ವಾಸನೆ, ನೆಲದ ಸಂಪ್ರದಾಯ, ಮದುವೆಯ ಮಹತ್ವದ ಅರಿವು ಮೂಡಿಸಲು ತರಾತುರಿಯಲ್ಲಿ ಲೋಕಲ್ ಹುಡುಗಿಯರ ಇಂಟರ್‌ವ್ಯೂ ನಡೆಸುತ್ತಿದ್ದಾರೆ.

ಬುರುಡೆ ನಂಬರ್ ಟೂ: ಹಾಗೆ ಹುಡುಕುತ್ತಿರುವ ಅವರ ಕಣ್ಣಿಗೆ ಪಾಸ್‌ಪೋರ್ಟ್, ವೀಸಾ ಎಂದು ಅಮೆರಿಕನ್ ಕಾನ್ಸುಲೇಟ್ ಮುಂದೆ ಚುರುಕಾಗಿ ಓಡಿಯಾಡುತ್ತಿರುವ ಭುವನ ಸುಂದರಿ ಐಶ್ವರ್ಯಾ ರೈ ಬಚ್ಚನ್‌ಳನ್ನೂ ಮೀರಿಸುವಂತಹ ತೆಳ್ಳಗೆ, ಬೆಳ್ಳಗಿನ ಒಬ್ಬ ಅಯ್ಯಂಗಾರ್ ಹುಡುಗಿ ಅವರ ಕ್ಯಾಮೆರಾ ಕಣ್ಣಿನಲ್ಲಿ ಸೆರೆಯಾಗಿದ್ದಾಳೆ. ಸದ್ಯಕ್ಕೆ ತಮ್ಮ ಮಗನಿಗೆ ಅವಳೇ ಸೂಕ್ತವೆಂಬ ನಿರ್ಧಾರವನ್ನು ಯಾರನ್ನೂ ಕೇಳದೇ ಅವರೇ ತೆಗೆದುಕೊಂಡಿದ್ದಾರೆ.

ಬುರುಡೆ ನಂಬರ್ ಥ್ರೀ: ಇದೀಗಷ್ಟೇ ಎಂಜಿನಿಯರಿಂಗ್ ಮುಗಿಸಿರುವ ಹುಡುಗಿ, ಕಳೆದ ಒಂದೈದಾರು ತಿಂಗಳಿಂದ ಮಹಾ ಬ್ಯುಸಿ. ಇನ್ನೂ ರಿಸಲ್ಟ್ ಬಾರದಿದ್ದರೂ, ಇದ್ದ ಬದ್ದ ಅಮೆರಿಕಾದ ಯೂನಿವರ್ಸಿಟಿಗಳಿಗೆಲ್ಲಾ ಅಪ್ಲೈ ಮಾಡಿ, ಕಡೆಗೊಮ್ಮೆ ಹೆಸರು ಗೊತ್ತಿರದ ಯೂನಿವರ್ಸಿಟಿಯಿಂದ ಕರೆ ಬಂದಾಗ, ಸ್ವರ್ಗಕ್ಕೆ ಮೂರೇ ಗೇಣೆಂದು ಹಲವು ವಿದ್ಯಾರ್ಥಿಗಳಂತೆ ತಪ್ಪಾಗಿ ಭಾವಿಸಿ, ಕುಣಿದು ಕುಪ್ಪಳಿಸಿ, ಅಮೆರಿಕಾಕ್ಕೆ ಹಾರುವ ತಯಾರಿಯಲ್ಲಿದ್ದಾಳೆ. ಬಿಲ್ ಗೇಟ್, ಬಿಲ್ ಕ್ಲಿಂಟನ್ ಮತ್ತು ಈಗ, ಡೋನಾಲ್ಡ್ ಟ್ರಂಪ್‌ನನ್ನು ತನ್ನ ಅಗಾಧ ಗರ್ಭದಲ್ಲಿ ಹೊತ್ತಿರುವ ಸಮೃದ್ಧ ದೇಶವೆಂದರೆ ಅಮೆರಿಕಾ. ಅವಕಾಶವನ್ನು ಅರಸಿ ಹೊರಟಿರುವ ಎಂತವರಿಗೂ ತೆರೆದ ಬಾಗಿಲ ಸ್ವಾಗತವನ್ನೀಡುವ ಮಹೋನ್ನತ ಶ್ರೀಮಂತ ರಾಷ್ಟ್ರವೆಂದರೆ ಅಮೆರಿಕಾ ಎಂದು ಹುಚ್ಚುಚ್ಚಾಗಿ ಭಾವಿಸುವ ಈ ಹಸುಳೆಗೆ ತನ್ನ ಅಂದ ಚಂದ ಸಾಮರ್ಥ್ಯದ ಬಗ್ಗೆ ಹಲವಾರು ಬಾಲಿಶ ಭ್ರಮೆಗಳಿವೆ. ಅನೇಕ ಮಧ್ಯಮ ವರ್ಗದ ಹೆಣ್ಣುಗಳಂತೆ, ತಾನು ಎಲ್ಲಿ ಹೋದರೂ ಜಯಿಸಬಲ್ಲೆನೆಂಬ ಹಗಲುಗನಸು ಕಾಣುತ್ತಿರುವ ಆಕೆಗೆ ಸದ್ಯ ನೆಲ ಕಾಣುತ್ತಿಲ್ಲ. ಅವಳ ಕಣ್ಣಳತೆಯಲ್ಲೇ ಅಗೋಚರ ಮಿಲಿಯನೇರ್ ಒಬ್ಬ ನಿಗೂಢವಾಗಿ ಓಡಿಯಾಡುತ್ತಿದ್ದಾನೆ. ಅವನು ಅಮೆರಿಕಾ ಪ್ರಜೆಯಾಗಿರಬಹುದು, ಭಾರತ ಪ್ರಜೆಯಾಗಿರಬಹುದು. ಮುಖ್ಯ ಅದಲ್ಲ. ದುಡ್ಡಷ್ಟೇ.

ಛೇ, ಪಾಪ! ಹುಡುಗಿಯನ್ನು ಹೀಗೆ ಚಿತ್ರಿಸುವುದೇ ಎಂಬ ಗೊಂದಲಕ್ಕೆ ಬಿದ್ದಿರೋ, ಕತೆ ಕೆಟ್ಟಿತು. ಅಷ್ಟೆಲ್ಲಾ ಸುಂದರ ಹುಡುಗಿಗೆ ಕಾಲೇಜ್ ದಿನಗಳಲ್ಲಿ ಬಾಯ್‌ಫ್ರೆಂಡ್ ಇರಲಿಲ್ಲವೇ ಅನ್ನುವ ಅನುಮಾನವೊಂದು ಮನಸ್ಸಿನ ಮೂಲೆಯಲ್ಲಿ ಮೂಡುತ್ತಿದೆಯೇ? ಇಂತಹ ಅನುಮಾನಗಳನ್ನು ಬಗೆ ಹರಿಸಿಕೊಳ್ಳದಿದ್ದರೆ ಕತೆ ಮುಂದೆಹೋಗಲು ಒಪ್ಪುವುದಿಲ್ಲವಾದ್ದರಿಂದ ಅರ್ಜೆಂಟಾಗಿ ಅವಳಿಗೊಬ್ಬ ಲವರ್‌ನ್ನು ಎಲ್ಲಿಂದಲಾದರೂ ಹುಡುಕಿ ಬಿಡೋಣ.

ಅವಳು ಸೇಂಟ್ ಜೋಸೆಫ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಓದುತ್ತಿದ್ದ ಕಾಲಕ್ಕೆ ಹೋಗೋಣ. ಇ.ಸಿ ಡಿಪಾರ್ಟ್‌ಮೆಂಟ್. ಆಗಷ್ಟೇ ಫ್ಯಾಕಲ್ಟಿಗೆ ಬಂದು ಸೇರಿರುವ ಒಬ್ಬ ಎಳೇ ಅಧ್ಯಾಪಕ. ಮತ್ತೆ ಸುಳ್ಳು ಅಥವಾ ಬುರುಡೆ ಅಂಥೇನೂ ಸೇರಿಸೋ ಅವಶ್ಯಕತೆಯಿಲ್ಲ. ಏಕೆಂದರೆ ಇಷ್ಟರಲ್ಲಾಗಲೇ ಕೋಕ್‌ಗೆ ವಿಸ್ಕಿ ಸೇರಿಸಿ ಕಾಕ್‌ಟೈಲ್ ಮಾಡೋದನ್ನು ನೀವೂ ಕಲಿತಿರುವುದರಿಂದ ಸೀದಾ ವಿಷಯಕ್ಕೆ ಬರೋಣ.

ನಂಬರ್ ಒಂದು: ವೆಲ್ಲೂರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಬಂದಿರುವ ಈ ಬಿ.ಟೆಕ್., ಎಂ.ಟೆಕ್., ಪಿಎಚ್.ಡಿ. ಹೋಲ್ಡರ್, ಹಾಗಂತ ತೆಗೆದು ಹಾಕುವಂತಹ ಆಳೇನಲ್ಲ. ತಮಿಳು ನಟ ಸೂರ್ಯನಷ್ಟು ಸುಂದರನಲ್ಲವಾದರೂ, ರಜನಿಕಾಂತ್‌ನಷ್ಟು ಹಾಳೇನಲ್ಲ. ಸೇಂಟ್ ಜೋಸೆಫ್ ಕಾಲೇಜ್‌ಗೆ ಅಧ್ಯಾಪಕನಾಗಿ ಹೊಸದಾಗಿ ಸೇರಿರುವ ಅವನಿಗೆ ಕಾಲೇಜಿನ ವಿಚಿತ್ರ ನಿಯಮಾವಳಿಗಳು